

ನೆಟ್ ಕೋರ್ಸ್‌ನಲ್ಲಿ
ಸಾಹಸ ಕ್ರೀಡೆ

# ರಾಮೋಜಿಯಲ್ಲಿ ಸಾಹಸ!

ಹೈದರಾಬಾದ್‌ನ 'ರಾಮೋಜಿ ಫಿಲ್ಮ್‌ಸಿಟಿ' ಚಿತ್ರರಂಗದ ಮಾಯಾಲೋಕ. ಸಿನಿಮಾ ಶೂಟಿಂಗಿಗೆ ಹೆಸರುವಾಸಿ ಆಗಿರುವ ಈ ತಾಣದಲ್ಲೀಗ ಸಾಹಸ ಕ್ರೀಡೆಗಳ ಹೊಸಲೋಕವೊಂದು ತಲೆ ಎತ್ತಿದೆ. 26 ಎಕರೆ ಪ್ರದೇಶದಲ್ಲಿ ಹರಡಿರುವ 'ಸಾಹಸ್ ಅಡ್ವೆಂಚರ್' ಯುವಜನರನ್ನು ಸೆಳೆಯುತ್ತಿದೆ.

★ ರಾಘವೇಂದ್ರ ಕೆ.

ವಿಶಾಲ ಬೆಟ್ಟಗುಡ್ಡಗಳ ಹಸಿರ ಕ್ಯಾನ್ವಾಸ್‌ನಲ್ಲಿ ಭೀಮಾರ್ಜುನರ ಸಾಹಸ ಮೆರೆಯಲು ಹತ್ತಾರು ಸವಾಲುಗಳು. ಮನಸ್ಸಿನ ಮೂಲೆಯಲ್ಲಿ ಎಲ್ಲೋ ಮನೆ ಮಾಡಿ ಅವಿತುಕೊಂಡಿರುವ ಪರಾಕ್ರಮವನ್ನು 'ಸಾಹಸ್ ಅಡ್ವೆಂಚರ್' ಬಡಿದೆಬ್ಬಿಸುವಂತೆ ಕಲಾತ್ಮಕವಾಗಿ ವಿನ್ಯಾಸಗೊಳಿಸಲಾಗಿದೆ. ಜಗತ್ತಿನ ಬೇರೆ ಬೇರೆ ದೇಶಗಳ 'ಅಡ್ವೆಂಚರ್' ಮಾದರಿಯ ನೀಲನಕ್ಷೆಯನ್ನು ಇಟ್ಟುಕೊಂಡು ವೈಜ್ಞಾನಿಕವಾಗಿ ಸಾಹಸ್‌ಅನ್ನು ರೂಪಿಸಲಾಗಿದೆ. ಪರಾಕ್ರಮ ಪ್ರದರ್ಶಿಸಿ ದೇಹ ಮನಸ್ಸುಗಳನ್ನು ಹಗುರ ಮಾಡಲು ಶಿಕ್ಷಿತ ತರಬೇತಿದಾರರು ಇಲ್ಲಿದ್ದಾರೆ. ಅದರಲ್ಲಿ ಒಬ್ಬ ಮಹಿಳೆಯೂ ಇದ್ದಾರೆ. ಆಟದ ನಿಯಮ– ಸುರಕ್ಷತೆಯ ಕ್ರಮಗಳನ್ನು ತಿಳಿಸಿ ಅಕಾಡಕ್ಕೆ ಬಿಟ್ಟರೆ ಅವರ ಹದ್ದಿನ ಕಣ್ಣಿನ ಕಾವಲಿನಲ್ಲೇ ಕ್ರೀಡಾಳುಗಳು ಕಸರತ್ತು ಮಾಡಬೇಕು. ಆಟದಲ್ಲಿ ಏನಾದರೂ ಅಡಚಣೆಯಾದರೆ ತರಬೇತುದಾರರು ಕೂಡಲೇ ನೆರವಿಗೆ ಬರುತ್ತಾರೆ.

ಪುರಾಣ– ಮಹಾಕಾವ್ಯದಲ್ಲಿ ಬರುವ ಸೆಣಸಾಟವನ್ನು ಇಲ್ಲಿ ರಂಜನೀಯ ಆಟವನ್ನಾಗಿ ರೂಪಾಂತರಿಸಲಾಗಿದೆ. ಅದರಲ್ಲಿ 'ಟಾರ್ಗೆಟ್ ಶೂಟ್ ರೇಂಜ್' ಬಿಲ್ಲುಗಾರಿಕೆಯೂ ಒಂದು. ಇದಕ್ಕೆ ಬಿಲ್ವಿದ್ಯೆ ಪ್ರವೀಣ ಅರ್ಜುನನ ಹೆಸರಿಡಲಾಗಿದೆ. ಇಟ್ಟ ಗುರಿಯ ಎದೆಗೆ ಬಾಣ ಚುಚ್ಚಲು ಬೇಕಾದ ತಂತ್ರಗಾರಿಕೆಯನ್ನು ತರಬೇತಿದಾರರು ಹೇಳಿ ಕೊಡುತ್ತಾರೆ. ಅವರ ಮಾತಿಗೆ ತಲೆಯಾಡಿಸಿ ಹೆಗಲಿಗೆ ಬಿಲ್ಲನ್ನು ಏರಿಸಿ ಹೂಡಿದ ಬಾಣವನ್ನು ಗುರಿಮುಟ್ಟಿಸುವ ಸಾಹಸಕ್ಕೆ ನಿಂತ ಬಿಲ್ಲುಗಾರ ನೆರೆದವರೆಲ್ಲರನ್ನೂ ನಗೆಗಡಲಲ್ಲಿ ತೇಲಿಸಿಬಿಡುತ್ತಾನೆ.

40ನೇ ಪುಟ ನೋಡಿ



ಭಂಗಿ ಜಂಪ್‌ನ ನೋಟ